**<u>ದಿಃ 06.11.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಪಾಟೀ ಸವಾಲುಃ 18 ನೇ ಪ್ರತಿವಾದಿ ಪರ ವಕೀಲರಿಂದಃ</u>**

1. ನಾನು ಬಿ.ಎ. ಪದವೀಧರನಾಗಿರುತ್ತೇನೆ. ನನ್ನ ತಾತನಾದ ತಿಮ್ಮಯ್ಯರವರಿಗೆ ಗಾಳಿಬೀಡು ಮತ್ತು ಮೋದೂರು ಗ್ರಾಮದಲ್ಲಿ ಆಸ್ತಿ ಇತ್ತು. ಸದರಿ ಆಸ್ತಿಗಳನ್ನು ಹೊರತುಪಡಿಸಿ ಸುಳ್ಯ ತಾಲೂಕಿನಲ್ಲೂ ಕೂಡಾ ಇತ್ತು. ಗಾಳಿಬೀಡು ಮತ್ತು ಮೋದೂರು ಗ್ರಾಮದಲ್ಲಿರುವ ಆಸ್ತಿಯನ್ನು ಹೊರತುಪಡಿಸಿ ಮಡಿಕೇರಿಯಲ್ಲಿ ನನ್ನ ತಾತನಾದ ತಿಮ್ಮಯ್ಯ ಅಥವಾ ನನ್ನ ತಂದೆಯ ಹೆಸರಿನಲ್ಲಿ ಯಾವುದೇ ಆಸ್ತಿ ಇರುವುದಿಲ್ಲ.

2. ನನ್ನ ತಂದೆ ಕಳೆದ 28 ವರ್ಷದ ಹಿಂದೆ ಸುಳ್ಯದಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಂದೆ ಮೃತಪಡುವ ಮೊದಲು ಹತ್ತು ವರ್ಷಗಳವರೆಗೆ ಸುಳ್ಯದ ಆಲೇಟಿ ಗ್ರಾಮದಲ್ಲಿ ವಾಸಿಸುತ್ತಿದ್ದರು. ಆಲೇಟಿ ಗ್ರಾಮದಲ್ಲಿ ವಾಸಿಸುವ ಮೊದಲು ನನ್ನ ತಂದೆ ಕುಟುಂಬದ ಜೊತೆ ಚೆಟ್ಟಳ್ಳಿ ಗ್ರಾಮದಲ್ಲಿ ನಾವು ಖರೀದಿಸಿದಂತಹ ಸ್ವಂತ ಆಸ್ತಿಯಲ್ಲಿ ವಾಸಿಸುತ್ತಿದ್ದರು. ಸದರಿ ಆಸ್ತಿಯನ್ನು 1981 ರಲ್ಲಿ ಖರೀದಿಸಿರುತ್ತೇವೆ. ಸದರಿ ಆಸ್ತಿಯನ್ನು ಖರೀದಿಸುವ ಮೊದಲು ನಾವು ಬೇರೆ ಯಾವುದೇ ಆಸ್ತಿಯನ್ನು ಖರೀದಿಸಿರುವುದಿಲ್ಲ. ಚೆಟ್ಟಳ್ಳಿ ಗ್ರಾಮದಲ್ಲಿ ನಾವು ಖರೀದಿಸಿದಂತಹ ಆಸ್ತಿಯನ್ನು 1991 ರಲ್ಲಿ ಮಾರಾಟ ಮಾಡಿರುತ್ತೇವೆ. ಸಾಕ್ಷಿಗೆ ದಿಃ 06.09.1991 ರಂದು ಆದಂತಹ ನೋಂದಾಯಿತ ಕ್ರಯಪತ್ರದ ದೃಢೀಕೃತ

ನಕಲನ್ನು ನೋಡಿ ಒಪ್ಪಿದ ಮೇರೆಗೆ ನಿಡಿ-65 ಎಂದು ಗುರುತಿಸಲಾಯಿತು.

3. ನನ್ನ ತಾತ ಅಥವಾ ನನ್ನ ತಂದೆಯವರಿಗೆ ಮಡಿಕೇರಿಯ ಕಾಲೂರು ಗ್ರಾಮದಲ್ಲಿ ಆಸಿತ ಇದೆಯೋ ಇಲ್ಲವೋ ಎಂದು ಹೇಳಲು ನನಗೆ ಗೊತ್ತಿಲ್ಲ. ದಾವಾ ಶೆಡ್ಯೂಲ್ ಐಟಂ ನಂಬರ್ 1 ರಿಂದ 31 ಆಸ್ತಿ ಮಡಿಕೇರಿಯ ಗಾಳಿಬೀಡುವಿನಲ್ಲಿರುವ ಆಸ್ತಿಗಳಾಗಿರುತ್ತದೆ ಎಂದರೆ ಸರಿ. ದಾವಾ ಶೆಡ್ಯೂಲ್ ಐಟಂ ನಂಬರ್ 1 ರಿಂದ 31 ಆಸ್ತಿಗಳು ನನ್ನ ತಂದೆಯ ಹೆಸರಿನಲ್ಲಿ ಇರುವ ಬಗ್ಗೆ ತೋರಿಸಲು ಆರ್.ಟಿ.ಸಿ.ಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

4. ದಿಃ 02.03.1971 ರಲ್ಲಿ ನನ್ನ ತಾತನಾದ ತಿಮ್ಮಯ್ಯರವರು ತನ್ನ ಐದು ಜನ ಗಂಡು ಮಕ್ಕಳಿಗೆ ಮಹಜರ್ ಮುಖಾಂತರ ತಮ್ಮ ಹೆಸರಿನಲ್ಲಿ ಇರುವ ಎಲ್ಲಾ ಆಸ್ತಿಗಳನ್ನು ವಿಭಾಗ ಮಾಡಿಕೊಟ್ಟಿರುತ್ತಾರೆ ಎಂದರೆ ಸುಳ್ಳು. ಸದರಿ ವಿಭಾಗದ ಪ್ರಕಾರ ನನ್ನ ತಂದೆಯವರ ಹಿಸ್ಸೆಗೆ ಮಡಿಕೇರಿಯ ಕಾಲೂರು ಗ್ರಾಮದಲ್ಲಿ ಇರುವ ಆಸ್ತಿಯನ್ನು ನೀಡಿರುತ್ತಾರೆ ಎಂದರೆ ಸುಳ್ಳು. ನನ್ನ ಚಿಕ್ಕಪ್ಪಂದಿರಾದಂತಹ ತಮ್ಮಯ್ಯ ಮತ್ತು ಜೋಯಪ್ಪರವರ ಹಿಸ್ಸೆಗೆ ಕಾಲೂರು ಗ್ರಾಮಕ್ಕೆ ಒಳಪಟ್ಟ ಆಸ್ತಿಯನ್ನು ನೀಡಿರುತ್ತಾರೆ ಎಂದರೆ ಸುಳ್ಳು. ನನ್ನ ತಂದೆಯವರು ತನ್ನ ಹಿಸ್ಸೆಗೆ ಬಂದಂತಹ ಕಾಲೂರು ಗ್ರಾಮದಲ್ಲಿ ಆಸ್ತಿಯನ್ನು ಮಾರಾಟ ಮಾಡಿ ಮೋದೂರು ಗ್ರಾಮದಲ್ಲಿ ಆಸ್ತಿ ಖರೀದಿಸಿರುತ್ತಾರೆ ಎಂದರೆ ಸರಿ. ನನ್ನ ತಾತ ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ಮೋದೂರಿನಲ್ಲಿ ಖರೀದಿಸಿದಂತಹ ಆಸ್ತಿಯನ್ನು ಮಾರಾಟ ಮಾಡಿ ನಿಡಿ-65 ರ ಪ್ರಕಾರ ಚೆಟ್ಟಳ್ಳಿಯಲ್ಲಿ ನನ್ನ ತಂದೆಯವರು ಆಸ್ತಿಯನ್ನು ಖರೀದಿಸಿರುತ್ತಾರೆ ಎಂದರೆ ಸುಳ್ಳು. ಮೋದೂರು ಗ್ರಾಮದಲ್ಲಿ ಇದ್ದಂತಹ ಆಸ್ತಿಯನ್ನು ಮಾರಾಟ ಮಾಡಿ ಬಂದಂತಹ ಹಣದಿಂದಲೇ ಚೆಟ್ಟಳ್ಳಿ ಗ್ರಾಮದ ಆಸ್ತಿಯನ್ನು ನನ್ನ ತಂದೆಯವರು ಖರೀದಿಸಿರುತ್ತಾರೆ ಎಂದರೆ ಸುಳ್ಳು. ನನ್ನ ತಂದೆಯವರಿಗೆ ಸಾಕಷ್ಟು ಬ್ಯಾಂಕ್ ಸಾಲ ಮತ್ತು ಕೈಸಾಲ ಇದ್ದುದರಿಂದ ಚೆಟ್ಟಳ್ಳಿ ಗ್ರಾಮದಲ್ಲಿ ಇದ್ದಂತಹ ಆಸ್ತಿಯನ್ನೂ ಕೂಡಾ ಮಾರಾಟ ಮಾಡಿರುತ್ತಾರೆ ಎಂದರೆ ಸುಳ್ಳು.

5. ನಾನು ಈಗ ಸುಳ್ಯದ ಆಲೆಟ್ಟಿಯಲ್ಲಿ ವಾಸಿಸುತ್ತಿದ್ದೇನೆ. ನನ್ನ ಬಳಿ 1.82 ಸೆಂಟ್ಸ್ ಆಸ್ತಿ ಇದೆ. ಮೋದೂರು ಗ್ರಾಮದಲ್ಲಿ ಇದ್ದಂತಹ ಆಸ್ತಿಯನ್ನು ಮಾರಾಟ ಮಾಡಿ ನನ್ನ ತಾತ ಆಲೆಟ್ಟಿ ಗ್ರಾಮದಲ್ಲಿ ಅಂದಾಜು 9 ಎಕರೆ ಆಸ್ತಿಯನ್ನು ಖರೀದಿಸಿದ್ದರು. ನನ್ನ

ಚಿಕ್ಕಪ್ಪನಾದ ತಮ್ಮಯ್ಯರವರು ಮದುವೆಯಾಗಿ ಮಕ್ಕಳಿಲ್ಲದೆ ಮೃತಪಟ್ಟಿದ್ದರು. 1981-82 ರಲ್ಲಿ ನನ್ನ ತಾತ ಆಲೆಟ್ಟಿ ಗ್ರಾಮದಲ್ಲಿ ಇದ್ದಂತಹ ಆಸ್ತಿಯಲ್ಲಿ ವಾಸಿಸುತ್ತಿದ್ದರು. ಆ ಸಮಯದಲ್ಲಿ ನನ್ನ ಚಿಕ್ಕಪ್ಪಂದಿರಾದ ಜೋಯಪ್ಪ ಮತ್ತು ತಮ್ಮಯ್ಯರವರೂ ಕೂಡಾ ಆಲೆಟ್ಟಿಯಲ್ಲಿ ಇರುವ ಮನೆಯಲ್ಲಿಯೇ ವಾಸಿಸುತ್ತಿದ್ದರು. ಮೊದಲಿಗೆ ತಮ್ಮಯ್ಯರವರು ಮೃತಪಟ್ಟಿದ್ದರು. ನಂತರದಲ್ಲಿ ನನ್ನ ತಾತ ಮೃತಪಟ್ಟಿರುತ್ತಾರೆ. ತಮ್ಮಯ್ಯರವರು ಮೃತಪಟ್ಟ ನಂತರದಲ್ಲಿ ನನ್ನ ತಾತ ಆಲೆಟ್ಟಿ ಗ್ರಾಮದಲ್ಲಿ ಇರುವ ಆಸ್ತಿಯನ್ನು ವಿಭಾಗ ಮಾಡಿ ತನ್ನ ಮಕ್ಕಳಿಗೆ ನೀಡಿರುತ್ತಾರೆ.

6. ನನ್ನ ತಂದೆ ಕೊಡಗಿನಲ್ಲಿ ಭತ್ತದ ವ್ಯಾಪಾರ ಮಾಡುತ್ತಿದ್ದರು. ನನ್ನ ತಂದೆಯವರು ಭತ್ತದ ವ್ಯಾಪಾರ ಮಾಡುತ್ತಿದ್ದರು ಎಂದು ತೋರಿಸಲು ದಾಖಲೆ ಇರುವುದಿಲ್ಲ. ನಾನು ಹೇಳುವ ಹಾಗೆ ನನ್ನ ತಂದೆ ಭತ್ತದ ವ್ಯಾಪಾರ ಮಾಡುತ್ತಿರಲಿಲ್ಲ ಎಂದರೆ ಸುಳ್ಳು. ನನ್ನ ತಂದೆಯವರು 1971 ರಲ್ಲಿ ಆಸ್ತಿಯನ್ನು ವಿಭಾಗ ಮಾಡಿಕೊಡುವವರೆಗೂ ನನ್ನ ತಾತನ ಜೊತೆ ಕೃಷಿಗೆ ಸಹಾಯ ಮಾಡುತ್ತಿದ್ದರು ಎಂದರೆ ಸುಳ್ಳು. ನನ್ನ ತಂದೆಗೆ ಬೇರೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸುಳ್ಳು. ಆರ್.ಟಿ.ಸಿಯಲ್ಲಿ ನಮೂದಿಸಿರುವಂತಹ ಕೆಲವು ವ್ಯಕ್ತಿಗಳ ಹೆಸರನ್ನು ನಾನು ನಿಪಿ-3 ತಿಳಿಸಿರುವುದಿಲ್ಲ ಎಂದರೆ ಸರಿ. ಆರ್.ಟಿ.ಸಿಯಲ್ಲಿ ನಮೂದಿಸಿರುವಂತಹ ಎಲ್ಲಾ ವ್ಯಕ್ತಿಗಳನ್ನು ನಾನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಆರ್.ಟಿ.ಸಿ ಪ್ರಕಾರ ಸದರಿ ವ್ಯಕ್ತಿಗಳ ಸ್ವಾಧೀನದಲ್ಲಿ ಆಸ್ತಿ ಇದೆ ಎಂದರೆ ಸರಿ.

7. ದಾವಾ ಶೆಡ್ಯೂಲ್ ಐಟಂ ನಂಬರ್ 4, 9 ಮತ್ತು 17 ಆಸ್ತಿ ಮೂಲತಃ ಬಾಣೆ ಜಾಗ ಎಂದರೆ ಸರಿ. ಕಂದಾಯ ನಿಗಧಿ ಪಡಿಸುವವರೆಗೂ ಬಾಣೆ ಜಾಗ ಸರ್ಕಾರಕ್ಕೆ ಸೇರಿದ ಆಸ್ತಿ ಎಂದರೆ ಸರಿ. ಪ್ರತಿವಾದಿ 18 ಮತ್ತು 2(ಬಿ)ರವರು ಹಲವು ವರ್ಷಗಳಿಂದ ಕೃಷಿ ಮಾಡಿಕೊಂಡು ಸರ್ಕಾರಕ್ಕೆ ಅರ್ಜಿ ಸಲ್ಲಿಸಿ ಕಂದಾಯವನ್ನು ನಿಗಧಿ ಪಡಿಸಿಕೊಂಡು ಅವರ ಹೆಸರಿನಲ್ಲಿ ಕಂದಾಯ ದಾಖಲೆಗಳನ್ನು ಮಾಡಿಕೊಂಡಿರುತ್ತಾರೆ ಎಂದರೆ ಸುಳ್ಳು. ದಾವಾ ಶೆಡ್ಯೂಲ್ ಐಟಂ ನಂಬರ್ 4, 9 ಮತ್ತು 17 ನಾನು ಹೇಳುವ ಹಾಗೆ ವಿಭಾಗಕ್ಕೆ ಒಳಪಡುವುದಿಲ್ಲ ಎಂದರೆ ಸುಳ್ಳು.

8. ನಿಪಿ-1 ಮತ್ತು 2 ರ ಪ್ರಕಾರ 1958 ರಿಂದ 1979 ರವರೆಗೆ ಜಮಾಬಂದಿಯನ್ನು

ನೀಡಿರುತ್ತೇನೆ ಎಂದರೆ ಸರಿ. 1979 ರ ನಂತರದಿಂದ 2000 ವರೆಗೆ ದಾವಾ ಶೆಡ್ಯೂಲ್ ಆಸ್ತಿಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ನಾನು ಯಾವುದೇ ರೆವಿನ್ಯೂ ದಾಖಲೆಯನ್ನು ನೀಡಿರುವುದಿಲ್ಲ. 1971 ರಲ್ಲಿ ನನ್ನ ತಾತ ಆಸ್ತಿಗಳನ್ನು ವಿಭಾಗ ಮಾಡಿಕೊಟ್ಟ ನಂತರದಿಂದ 1979 ರವರೆಗೆ ನನ್ನ ತಂದೆ ಅಥವಾ ನನ್ನ ಚಿಕ್ಕಪ್ಪಂದಿರ ಹೆಸರಿನಲ್ಲಿ ಯಾವುದೇ ರೆವಿನ್ಯೂ ದಾಖಲೆ ಇರುವುದಿಲ್ಲ ಎಂದರೆ ಸುಳ್ಳು. ದಾವಾ ಶೆಡ್ಯೂಲ್ ಆಸ್ತಿಗಳು ಈಗಾಗಲೇ 1971 ರಲ್ಲಿ ವಿಭಾಗ ಆಗಿದ್ದು ನನ್ನ ತಂದೆ ಮತ್ತು ಚಿಕ್ಕಪ್ಪಂದಿರ ಹಿಸ್ಸೆಗೆ ಆಸ್ತಿಗಳನ್ನು ನೀಡಿರುವುದರಿಂದ ಈಗ ನಾನು ಸದರಿ ಆಸ್ತಿಗಳಲ್ಲಿ ವಿಭಾಗ ಕೇಳಲು ಹಕ್ಕು ಇರುವುದಿಲ್ಲ ಎಂದರೆ ಸುಳ್ಳು. ನಾನು ಅಕ್ರಮವಾಗಿ ಆಸ್ತಿಯನ್ನು ಪಡೆದುಕೊಳ್ಳುವ ಉದ್ದೇಶದಿಂದ ಈ ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸುಳ್ಳು.

ಈ ಹಂತದಲ್ಲಿ ಪ್ರತಿವಾದಿ 22 ರಿಂದ 24 ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-
(ಎನ್ ಬಿ ಜಯಲಕ್ಷ್ಮಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.